DFA/2889653

**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 380
ಸದಸ್ಯರ ಹೆಸರು : ಡಾ: ಎಂ.ಜಿ. ಮುಳೆ
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 19.08.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೀದರ್ ಜಿಲ್ಲೆಯ ಹುಮನಾಬಾದ್-ಕನಕಟ್ಟಾ-ಘಾಟಬೋರಳ-ಭಾಲ್ಕಿ ಮಾರ್ಗವಾಗಿ ನೆರೆಯ ಮಹಾರಾಷ್ಟ್ರದ ಉದಗಿರ ನಗರಕ್ಕೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ (KKRTC) ನಿಗಮ ನೇರ ಬಸ್ ಸೇವೆ ಕಾರ್ಯನಿರ್ವಹಿಸುತ್ತಿದೆಯೇ; ಇದ್ದಲ್ಲಿ, ಬಸ್‌ಗಳ ಸಂಖ್ಯೆ ವೇಳಾಪಟ್ಟಿ ಹಾಗೂ ದೈನಂದಿನ ಪ್ರಯಾಣಿಕರ ವಿವರವೇನು; | ಪ್ರಸ್ತುತ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ ಹುಮನಾಬಾದ್-ಕನಕಟ್ಟಾ-ಘಾಟಬೋರಳ-ಭಾಲ್ಕಿ ಮಾರ್ಗವಾಗಿ ನೆರೆಯ ಮಹಾರಾಷ್ಟ್ರದ ಉದಗಿರ ನಗರಕ್ಕೆ ನೇರ ಬಸ್ ಸೇವೆ ಇರುವುದಿಲ್ಲ.<br><br>ಆದರೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ ಹುಮನಾಬಾದ್-ಕನಕಟ್ಟಾ-ಘಾಟಬೋರಳ-ಭಾಲ್ಕಿ ಮಾರ್ಗದಲ್ಲಿ ಪ್ರತಿದಿನ 03 ಅನುಸೂಚಿಗಳಿಂದ 05 ಟ್ರಿಪ್‌ಗಳನ್ನು (07:00, 08:45, 11:00, 14:45 ಮತ್ತು 19:20) ಕಾರ್ಯಾಚರಿಸಲಾಗುತ್ತಿದೆ.<br><br>ಭಾಲ್ಕಿ ಯಿಂದ ನೇರವಾಗಿ ನೆರೆಯ ಮಹಾರಾಷ್ಟ್ರದ ಉದಗಿರಗೆ ಪ್ರತಿ 1 3 ನಿಮಿಷಕ್ಕೊಂದರಂತೆ ಪ್ರತಿದಿನ ಬೆಳಗ್ಗೆ 06:30 ರಿಂದ 21:30 ಗಂಟೆಯವರೆಗೆ 38 ಬಸ್‌ಗಳಿಂದ 71 ಟ್ರಿಪ್‌ಗಳನ್ನು ಕಾರ್ಯಾಚರಿಸಲಾಗುತ್ತಿದೆ. |
| ಆ | ಈ ಗಡಿ ಮಾರ್ಗದ ಗ್ರಾಮಗಳ ಸಾವಿರಾರು ರೈತರು, ವಿದ್ಯಾರ್ಥಿಗಳು, ಉದ್ಯೋಗಿಗಳು, ಮಹಿಳೆಯರು ಹಾಗೂ ವ್ಯಾಪಾರಸ್ಥರು ಶಿಕ್ಷಣ, ವೈದ್ಯಕೀಯ ಚಿಕಿತ್ಸೆ ಕೃಷಿ ಉತ್ಪನ್ನಗಳ ಮಾರಾಟ ಮತ್ತು ಉದ್ಯೋಗಕ್ಕಾಗಿ ಪ್ರತಿದಿನ ಉದಗಿರ ನಗರಕ್ಕೆ ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸಾರಿಗೆ ನಿಗಮವು ಯಾವುದೇ ಬೇಡಿಕೆ ಸಮೀಕ್ಷೆ (Demand Survey) ನಡೆಸಿದೆಯೇ; ಇದ್ದಲ್ಲಿ, ಅದರ ವಿವರವೇನು; | ಬೇಡಿಕೆ ಸಮೀಕ್ಷೆ ಕೈಗೊಂಡಿರುವುದಿಲ್ಲ. |



File No. TD/216/TCQ/2026-Sec 1-Trans (Computer No. 2265128)

| | | |
|---|---|---|
| ಇ | ಈ ಭಾಗದಲ್ಲಿ ನಿಯಮಿತಿ ಸರ್ಕಾರಿ ಬಸ್ ಸೇವೆ ಇಲ್ಲದಿರುವುದರಿಂದ ಸಾರ್ವಜನಿಕರು ಹಾಗೂ 'ಶಕ್ತಿ' ಯೋಜನೆಯ ಫಲಾನುಭವಿ ಮಹಿಳೆಯರು ಖಾಸಗಿ ಅಪೇ/ ಟಂಟಂ ವಾಹನಗಳನ್ನು ಅವಲಂಬಿಸಿ ಹೆಚ್ಚಿನ ಪ್ರಯಾಣ ವೆಚ್ಚ ಅನಾನುಕೂಲತೆ ಹಾಗೂ ಅಪಘಾತದ ಅಪಾಯವನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಮಸ್ಯೆ ನಿವಾರಣೆಗೆ ಕೈಗೊಂಡ ಕ್ರಮಗಳೇನು; | ಪ್ರಸ್ತುತ ಹುಮನಾಬಾದ್-ಕನಕಟ್ಟಾ-ಘಾಟಬೋರಳ-ಭಾಲ್ಕಿ ಮಾರ್ಗದಲ್ಲಿ ಬೇಡಿಕೆ/ಅವಶ್ಯಕತೆಗನುಗುಣವಾಗಿ ಸಾರಿಗೆ ಸೇವೆಯನ್ನು ಕಲ್ಪಿಸಲಾಗಿರುತ್ತದೆ. ಹೆಚ್ಚುವರಿ ಬೇಡಿಕೆ ಬಂದಿರುವುದಿಲ್ಲ. ಬಂದಲ್ಲಿ ಪರಿಶೀಲಿಸಿ, ನಿಯಮಾನುಸಾರ ಕ್ರಮವಹಿಸಲಾಗುವುದು.<br><br>ಮುಂದುವರೆದು, ಜೂನ್-2023ರ ಮಾಹೆಯಿಂದ ಶಕ್ತಿ ಯೋಜನೆ ಜಾರಿಯಾಗಿದ್ದು, ನಂತರದಲ್ಲಿ ಪ್ರಯಾಣಿಕರ ಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಳವಾಗಿರುತ್ತದೆ. ಅದಕ್ಕನುಗುಣವಾಗಿ ಹೆಚ್ಚುವರಿ ಟ್ರಿಪ್‌ಗಳನ್ನು ನೀಡಿ ಸಾರಿಗೆ ಸೌಲಭ್ಯ ಕಲ್ಪಿಸಲಾಗುತ್ತಿದೆ. ಸಾರ್ವಜನಿಕ ಪ್ರಯಾಣಿಕರು/ಶಾಲಾ-ಕಾಲೇಜು ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಅವಶ್ಯಕತೆಯನ್ನು ಪರಿಶೀಲಿಸಿ ಹೆಚ್ಚುವರಿ ಸಾರಿಗೆ ಸೌಲಭ್ಯ ಕಲ್ಪಿಸುವ ಕ್ರಮ ನಿರಂತರ ಜಾರಿಯಲ್ಲಿರುತ್ತದೆ. |
| ಈ | ಗಡಿಭಾಗದ ಜನರ ಹಾಗೂ ವಿದ್ಯಾರ್ಥಿಗಳ ಬಹುಕಾಲದ ಬೇಡಿಕೆಯನ್ನು ಪರಿಗಣಿಸಿ ಹುಮನಾಬಾದ್-ಕನಕಟ್ಟಾ-ಘಾಟಬೋರಳ-ಭಾಲ್ಕಿ-ಉದಗಿರ (ಮಹಾರಾಷ್ಟ್ರ) ಮಾರ್ಗದಲ್ಲಿ ಪ್ರತಿದಿನ ಬೆಳಿಗ್ಗೆ ಹಾಗೂ ಸಂಜೆ ಸೂಕ್ತ ವೇಳಾಪಟ್ಟಿಯೊಂದಿಗೆ ನೂತನ KKRTC ನೇರ ಬಸ್ ಸೇವೆಯನ್ನು ಯಾವ ಕಾಲಮಿತಿಯಲ್ಲಿ ಪ್ರಾರಂಭಿಸಲಾಗುವುದು; ಇಲ್ಲವಾದಲ್ಲಿ ಕಾರಣಗಳೇನು? | ಪ್ರಸ್ತುತ ಬೀದರ್ ಭಾಗದಲ್ಲಿ ಬಸ್‌ಗಳ ಕೊರತೆಯಿರುವುದರಿಂದ 2026-27ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಖರೀದಿಸಲು ಯೋಜಿಸಲಾಗಿರುವ ಹೊಸ ಬಸ್‌ಗಳು ಸೇರ್ಪಡೆಯ ನಂತರ ಹುಮನಾಬಾದ್-ಕನಕಟ್ಟಾ-ಘಾಟಬೋರಳ-ಭಾಲ್ಕಿ-ಉದಗಿರ ಮಾರ್ಗವಾಗಿ ಬಸ್ ಸೇವೆಯನ್ನು ಪ್ರಾರಂಭಿಸಲು ಆದ್ಯತೆಯ ಮೇರೆಗೆ ಕ್ರಮವಹಿಸಲಾಗುವುದು. |

ಸಂಖ್ಯೆ:ಟಿಡಿ 216 ಟಿಸಿಕ್ಯೂ 2026

(ಬಿ.ಎಸ್. ಸುರೇಶ)

ಸಾರಿಗೆ ಸಚಿವರು